ಓ ಎಸ್ ನಂಬರ ಃ 215/2012
**ಡಿಡಬ್ಲ್ಯು 1**



ದಿನಾಂಕ 22-2-2017
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.
**ಪಾಟೀ ಸವಾಲು ಃ ಶ್ರೀ ಡಿಬಿಎನ್ ವಕೀಲರಿಂದ**

ನಾನು 7ನೇ ಇಯತ್ತೇ ಕನ್ನಡ ಶಾಲೆ ಕಲಿತಿದ್ದೇನೆ. ನನ್ನ ಮಾವ ಗುರುಬಸಪ್ಪನಿಗೆ ನನ್ನ ಮೃತ ಗಂಡ ಚಂದ್ರಶೇಖರ ಮತ್ತು ವಾದಿ ಶಿವಪ್ಪ ಇಬ್ಬರೇ ಗಂಡು ಮಕ್ಕಳು. ನಾನು ಮತ್ತು ನನ್ನ ಮಕ್ಕಳು ಬೆಂಗಳೂರಿನ ಮನೆಯಲ್ಲಿ ಇರುತ್ತೇವೆ ಅಲ್ಲಿ 2 ಮನೆಗಳು ಇವೆ. 1983ರಿಂದ ಅಲ್ಲಿಯೇ ಇದ್ದೇವೆ.

ನನ್ನ ಸಾಕ್ಷಿ ಪ್ರಮಾಣಪತ್ರ ಏನು ಬರೆದಿದೆ ಗೊತ್ತಿಲ್ಲ, ದಾವಾ ಆಸ್ತಿ ಗುರುಬಸಪ್ಪ ಹಾಗು ಶಿವಪ್ಪನಿಗೂ ಸಂಬಂದ ಇಲ್ಲ, ಚಂದ್ರಶೇಖರನದ್ದೇ ಆಸ್ತಿ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಹಣ ಕೊಟ್ಟು ಗುರುಬಸಪ್ಪನ ಹೆಸರಲ್ಲಿ ಈ ಆಸ್ತಿ ಖರೀದಿಸಿದ್ದ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಚಂದ್ರಶೇಖರನದ್ದೇ ಎಂದು ಶಿವಪ್ಪನಿಗೂ ಗೊತ್ತಿತ್ತು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಗುರುಬಸಪ್ಪ ನನ್ನ ಗಂಡ ಚಂದ್ರಶೇಖರನಿಗೆ ಸದರಿ ಆಸ್ತಿ ಬಿಟ್ಟುಕೊಟ್ಟಿದ್ದಾನೆ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ.

ಶಿವಪ್ಪ ಇತ ತನ್ನ ಅಣ್ಣ ಚಂದ್ರಶೇಖರ ಮಾತ್ರ ದಾವಾ ಆಸ್ತಿಗೆ ತನ್ನ ಹೆಸರು ಹಚ್ಚಿಕೊಳ್ಳಲಿ ಎಂದು ತನ್ನದೇನು ತಕರಾರು ಇಲ್ಲವೆಂದು ಬರೆದುಕೊಟ್ಟಿದ್ದಾನೆ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಸಂಬಂದದಲ್ಲಿ ನನ್ನ ಗಂಡ ಚಂದ್ರಶೇಖರ ನನ್ನ ಹೆಸರಿಗೆ ವಿಲ್ ಬರೆಯುವ ಅಧಿಕಾರ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಅಧಿಕಾರವಿಲ್ಲದೇ ವಿಲ್ ಬರೆದುಕೊಟ್ಟ ಎಂದರೆ ಸರಿಯಲ್ಲ, ಸದರಿ ವಿಲ್ ಮೇಲೆ ದಾವಾ ಆಸ್ತಿಗೆ ನನ್ನ ಹೆಸರು ದಾಖಲಿಸಿಕೊಂಡಿದ್ದು ಕಾನೂನು ಪ್ರಕಾರ ಸರಿಯಲ್ಲ ಅನ್ನುವುದು ಸರಿಯಲ್ಲ, ದಾವಾ ಆಸ್ತಿಗೆ ನನ್ನ ಗಂಡ ಸಂಬಂದ ಇಲ್ಲ ಎಂದರೆ ಸರಿಯಲ್ಲ, ನಿಡಿ 14 ಖರೀದಿ ಪತ್ರದಲ್ಲಿ ಚಂದ್ರಶೇಖರ ಹಣ ಕೊಟ್ಟು ಗುರುಬಸಪ್ಪನ ಹೆಸರಲ್ಲಿ ಈ ಆಸ್ತಿ ಖರೀದಿ ಮಾಡಿದ್ದರು ಎಂದರೆ ಕಾಣಿಸಿಲ್ಲ ಎಂದರೆ ಸರಿ. ದಾವಾ ಆಸ್ತಿ ಗುರುಬಸಪ್ಪನ

ಸ್ವಯಾರ್ಜಿತ ಆಸ್ತಿ ಆಗಿದ್ದರಿಂದ ಆತನ ಮರಣದ ನಂತರ ಶಿವಪ್ಪ ಹಾಗು ಚಂದ್ರಶೇಖರನಿಗೆ ಸಮನಾಗಿ ಬರಬೇಕಾಗುತ್ತದೆ ಎಂದರೆ ಸರಿಯಲ್ಲ, ದಾವಾ ಆಸ್ತಿಯಲ್ಲಿ ಶಿವಪ್ಪನಿಗೆ ಪಾಲು ಕೊಡಬಾರದು ಎಂಬ ಉದ್ದೇಶದಿಂದ ನಮ್ಮ ಮಕ್ಕಳ ಮಾತು ಕೇಳಿಕೊಂಡು ಇಗ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ, ವಾದಿ ಪಾಲು ಕೊಡು ಎಂದು ಕೇಳಿದ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ, ನಿಡಿ 1 ರಂತೆ ಶಿವಪ್ಪ ಹಾಗು ಆತನ ಮಕ್ಕಳು ಸೇರಿ ಕಾರ್ಯದರ್ಶಿ ಗ್ರಾಮಪಂಚಾಯತಿ ಕ್ಯಾರಕೊಪ್ಪ ಇವರಿಗೆ ಪತ್ರ ನೀಡಿ ಚಂದ್ರಶೇಖರ ಹೆಸರನ್ನು ಮಾತ್ರ ದಾವಾ ಆಸ್ತಿಗೆ ದಾಖಲು ಮಾಡಲು ತಮ್ಮದು ತಕರಾರು ಇಲ್ಲ ಎಂದು ಹೇಳಿದ್ದರೂ ಎಂದರೆ ಸರಿಯಲ್ಲ, ವಾದಿಯೇ ಈ ರೀತಿ ಹೆಸರು ಹಚ್ಚಿಸಿದ್ದಾರೆ ಎಂದರೆ ಸರಿಯಲ್ಲ, ಸುಳ್ಳು ಸಾಕ್ಷಿ ಪ್ರಮಾಣಪತ್ರ ಬರೆಸಿ ಹಾಕಿದ್ದೇನೆ ಎಂದರೆ ಸರಿಯಲ್ಲ, ಶಿವಪ್ಪನೇ ಬಂದು ಚಂದ್ರಶೇಖರನ ಹೆಸರು ದಾಖಲಿಸಿಕೊಟ್ಟ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ,

ನಿವೃತ್ತಿ ನಂತರ ನನ್ನ ಗಂಡ ಆಸ್ತಿ ಖರೀದಿಸುವ ಇಚ್ಚೆ ಹೊಂದಿದ್ದ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ, ಗುರುಬಸಪ್ಪನ ಹೆಸರಿಗೆ ಆಸ್ತಿ ಹಿಡಿಯಲು ಚಂದ್ರಶೇಖರ ಹಣ ಕೊಟ್ಟಿದ್ದ ಎಂದು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ, ನನ್ನ ಪ್ರಮಾಣಪತ್ರದಲ್ಲಿ ಎಲ್ಲಾ ಸುಳ್ಳು ಸಂಗತಿ ಬರೆಸಿ ಹಾಕಿದ್ದೇನೆ ಎಂದರೆ ಸರಿಯಲ್ಲ, ಸದರಿ ಆಸ್ತಿ ಗುರುಬಸಪ್ಪನ ಹೆಸರಲ್ಲಿ ಖರೀದಿಸಿದ್ದ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ, ನನ್ನ ಗಂಡ ಕೃಷಿ ಇಲಾಖೆಯಲ್ಲಿ ಜೊಯಿಂಟ ಡೈರೆಕ್ಟರ್ ಇದ್ದರು. ಅವರು ಇನಕಮ್ ಟ್ಯಾಕ್ಸ ತುಂಬಿದ ಕುರಿತು ನನಗೇನು ಗೊತ್ತಿಲ್ಲ, ಇನ್‌ಕಮ್ ಟ್ಯಾಕ್ಸ ತುಂಬಿದ ಕುರಿತು ದಾಖಲಾತಿ ಹಾಜರುಮಾಡಿಲ್ಲ ಎಂದರೆ ಸರಿ. ಶಿವಪ್ಪ ಪಂಚಾಯತಿಗೆ ಬಂದಿಲ್ಲ ಹಾಗು ನಿಡಿ 1 ರಿಂದ 5. 7. 9. 15. 16. 17. 18ರ ಮೇಲೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ, ಇಗ ತೋರಿಸಿದ ನಿಡಿ 18ರ ಮೇಲಿನ ಅಕ್ಷರಗಳು ಗುರುಬಸಪ್ಪನದ್ದು ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಇರಬಹುದು, ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ನಿಡಿ 18ರ ಮೇಲಿನ ಸಹಿ ನಿಡಿ 18ಎ ಗುರುಬಸಪ್ಪನದ್ದೇ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ,

ಈಗ ತೋರಿಸಿದ ಮಾರ್ಚ 1978ರಂದು ಗುರುಬಸಪ್ಪ ಇತ ಸ್ವಾಮಿ ಕೃಷ್ಣಾನಂದ ಯೋಗ ವೇದಾಂತ ಅಕಾಡೆಮಿ ಇದರ ಮೇಲಿರುವ ಸಹಿ ತೋರಿಸಿದ್ದು ಸದರಿ ಸಹಿ ಗುರುಬಸಪ್ಪನದ್ದೇ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ 4 ಎಂದು ಸಹಿಯನ್ನು ನಿಪಿ 4ಎ ಎಂದು ಗುರುತಿಸಲಾಯಿತು. 1967ರಲ್ಲಿ ಶಿವಪ್ಪ ಹಾಗು ಚಂದ್ರಶೇಖರ ಬೇರೆ ಬೇರ ಆಗಿದ್ದಾರೆ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ, ಅಲ್ಲಿ ಫ್ಲೋರ್ ಮಿಲ್ ಹಾಕುವ ಸಲುವಾಗಿ ಈ ಆಸ್ತಿ ಖರೀದಿಸಿದ್ದರು ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ, ನಿಡಿ 18 ಹಾಗು ನಿಪಿ 4ರ ಮೇಲೆ ಎರಡೂ ಸಹಿಗಳು ನಮ್ಮ ಮಾವನದ್ದೆ ಇರುತ್ತವೆ, ನಿಡಿ 18ರ ಸಹಿ ನನ್ನ ಮಾವನದ್ದು ಅಲ್ಲ ಎಂದರೆ ಸರಿಯಲ್ಲ, ಶಿವಪ್ಪನಿಗೆ ಆಸ್ತಿ ಕೊಡುವುದನ್ನು ತಪ್ಪಿಸಲು ಮಕ್ಕಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ, ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾದೀಶರು
ಮತ್ತು ಪ್ರದನ್ಯಾದಂ, ಧಾರವಾಡ